ಓ.ಎಸ್.ನಂಃ 59/2017 ಪಿಡಬ್ಲ್ಯೂಃ 1

ಸಾಕ್ಷಿದಾರನನ್ನು ಕರೆಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 09-03-2022.

**ಮುಂದುವರಿದ ಪಾಟೀ ಸವಾಲು - ಪ್ರತಿವಾದಿ ಪರ ಶ್ರೀ ಎಫ್. ಎಂ. ಎಂ. ವಕೀಲರಿಂದ.**

1) ನಮ್ಮ ಘರಾಣೆಯ ಮೂಲ ಪುರುಷನ ಹೆಸರು ರುದ್ರಪ್ಪ ಶಿವಣ್ಣನವರ ಎಂದರೆ ಸರಿ. ಸದರಿ ಮೂಲ ಪುರುಷ ರುದ್ರಪ್ಪನಿಗೆ ಶಿವಪ್ಪ, ನಾಗಪ್ಪ ಮತ್ತು ಮಹದೇವಪ್ಪ ಎಂಬ ಮೂರು ಜನ ಗಂಡು ಮಕ್ಕಳು ಎಂದರೆ ಸರಿ. ಅವರು ಏಕತ್ರ ಘರಾಣೆಯಲ್ಲಿದ್ದಾಗ ನನ್ನ ತಂದೆ ಶಿವಪ್ಪನೇ ಮನೆತನದ ಹಿರೇತನ ಮಾಡುತ್ತಿದ್ದರು ಎಂದರೆ ಸರಿ. ಬ್ಯಾಡಗಿ ತಾಲೂಕು ಶಂಕರೀಪುರ ಗ್ರಾಮದಲ್ಲಿ ಕರಿಶಿವಪ್ಪ ಮತ್ತು ಕುಂಟ ಶಿವಪ್ಪ ಇದ್ದು, ನಮ್ಮ ತಂದೆಯನ್ನು ಕರಿಶಿವಪ್ಪ ಎಂದು ಕರೆಯುತ್ತಿದ್ದರು ಎಂದರೆ ಸರಿ.

2) ಸದರಿ ಶಿವಪ್ಪ ಮತ್ತು ರುದ್ರಪ್ಪನಿಗೆ ಸಣ್ಣ ಶಿವಣ್ಣನವರ ಇವರ ಜೊತೆ ನನ್ನ ತಂದೆ ಎತ್ತಿನ ವ್ಯಾಪಾರ ಮತ್ತು ಹೊಲ ಮನೆ ಕೊಡಿಸುವ ಮತ್ತು ತೆಗೆದುಕೊಳ್ಳುವ ವ್ಯಾಪಾರ ನಡೆಸುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಅದು ಸಂಬಂಧ ಇಲ್ಲದ್ದು ಎಂದು ಉತ್ತರಿಸುತ್ತಾರೆ. ನಾವು ಕೂಡಿ ಇದ್ದಾಗ ರಿ. ಸ. ನಂಃ 86/1+2+4+5+3/1 ಬಿ ಕ್ಷೇತ್ರ 5 ಎಕರೆ 10 ಗುಂಟೆ ಜಮೀನನ್ನು ರುದ್ರಪ್ಪ ಸಣ್ಣ ಶಿವಣ್ಣನವರ ಇವರು ನನ್ನ ತಂದೆಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆದರೆ ಖರೀದಿ ಹಿಡಿದ ಜಮೀನು ಹೌದು ಆದರೆ ಸದರಿ ರುದ್ರಪ್ಪ ಸಣ್ಣ ಶಿವಣ್ಣನವರ ಇವರಿಂದ ಖರೀದಿಗೆ ಹಿಡಿದಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ನೊಂದಾದ ಖರೀದಿ ಪತ್ರಕ್ಕೆ ರುದ್ರಪ್ಪ ಸಣ್ಣ ಶಿವಣ್ಣನವರು ಸಾಕ್ಷಿದಾರರಾಗಿ ಸಹಿಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ.

3) ರುದ್ರಪ್ಪ ಸಣ್ಣ ಶಿವಣ್ಣನವರ ಇವರು ಅನೇಕ ಜಮೀನುಗಳನ್ನು ಖರೀದಿಗೆ ಹಿಡಿದಿರುತ್ತಾರೆ ಎಂದರೆ ಇರಬಹುದು ಎಂದು ಉತ್ತರಿಸುತ್ತಾರೆ.

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಹಿ/-
ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.